"ಮಧುರ ಮಕ್ಕಳೇ - ಅಮೃತವೇಳೆ ಎದ್ದು ಯೋಗದಲ್ಲಿ ಕುಳಿತುಕೊಳ್ಳಿ, ವಿಚಾರ ಮಾಡಿ - ನಾನು ಆತ್ಮನಾಗಿದ್ದೇನೆ, ನಮ್ಮ ಬಾಬಾ ಮಾಲಿಯಾಗಿದ್ದಾರೆ, ಅವರೇ ಅಂಬಿಗನಾಗಿದ್ದಾರೆ, ನಾನು ಅವರ ಸಂತಾನನಾಗಿದ್ದೇನೆ, ಮಾಲೀಕರಾಗಿ ಜ್ಞಾನರತ್ನಗಳ ಸ್ಮರಣೆ ಮಾಡಿ"

ಪ್ರಶ್ನೆ: ಯಾವ ಒಂದು ಮಾತಿನ ಮಹತ್ವವು ಪ್ರಪಂಚದಲ್ಲಿಯೂ ಸಹ ಇದೆ ಅಂದಾಗ ತಂದೆಯ ಬಳಿಯೂ ಸಹ ಇದೆ?

ಉತ್ತರ: ದಾನದ ಮಹತ್ವ. ನೀವು ಮಕ್ಕಳಿಗೆ ದಯಾಹೃದಯಿಗಳಾಗಿ ಎಲ್ಲರ ಮೇಲೂ ದಯೆ ತೋರಿಸಬೇಕಾಗಿದೆ. ಎಲ್ಲರಿಗೂ ಅವಿನಾಶಿ ಜ್ಞಾನರತ್ನಗಳ ದಾನ ಕೊಡಬೇಕಾಗಿದೆ. ದಾನಿಗಳದ್ದು ಬಹಳ ಮಹಿಮೆಯಾಗುತ್ತದೆ. ಪತ್ರಿಕೆಗಳಲ್ಲಿಯೂ ಅವರ ಹೆಸರನ್ನು ಹಾಕಿಸಲಾಗುತ್ತದೆ ಅಂದಾಗ ನೀವೂ ಸಹ ಎಲ್ಲರಿಗೂ ದಾನ ಮಾಡಬೇಕಾಗಿದೆ ಅರ್ಥಾತ್ ಯೋಗವನ್ನು ಕಲಿಸಬೇಕಾಗಿದೆ.

ಗೀತೆ: ನನಗೆ ಆಶ್ರಯವನ್ನು ನೀಡುವಂತಹವರು ......................

ಓಂ ಶಾಂತಿ. ಯಾರು ಮಲಗಿರುತ್ತಾರೆಯೋ ಅವರಿಗೆ ಆಶ್ರಯ ಕೊಡುತ್ತಾರೆ. ಅವರನ್ನು ಪಾರು ಮಾಡಲು ಆಶ್ರಯವನ್ನು ಕೊಡುತ್ತಾರೆ ಏಕೆಂದರೆ ಅಂಬಿಗ ಎನ್ನುವ ಹೆಸರನ್ನು ಭಾರತವಾಸಿಗಳೇ ತಿಳಿದುಕೊಂಡಿದ್ದಾರೆ. ಮುಳುಗಿರುವಂತಹವರನ್ನು ಪಾರು ಮಾಡುವುದೇ ಅಂಬಿಗನ ಕೆಲಸವಾಗಿದೆ. ಭಾರತವಾಸಿಗಳ ಜೀವನದ ನೌಕೆಯು ಮುಳುಗಿಹೋಗಿದೆ ಎಂದು ಮಕ್ಕಳಿಗೆ ತಿಳಿದಿದೆ. ಪ್ರತಿಯೊಂದು ಮಾತು ಭಾರತವಾಸಿಗಳಿಗಾಗಿಯೇ ಇದೆ ಮತ್ತು ಯಾವುದೇ ಖಂಡಕ್ಕೋಸ್ಕರವಲ್ಲ ಎನ್ನುವುದನ್ನು ನೀವು ತಿಳಿದುಕೊಂಡಿದ್ದೀರಿ. ಸತ್ಯನಾರಾಯಣ ಕಥೆ ಅಥವಾ ಅಮರನಾಥನ ಕಥೆಯು ಇಲ್ಲಿಯೇ ಆಗುತ್ತದೆ. ಬೆಳಗ್ಗೆ ಯೋಗದಲ್ಲಿ ಕುಳಿತುಕೊಂಡಾಗ ಯಾರನ್ನು ನೆನಪು ಮಾಡುತ್ತಾರೆ. ಅವರೆಲ್ಲರ ಸಾಧನೆಯು ಅಯಥಾರ್ಥವಾಗಿದೆ. ಯಾರನ್ನೋ, ಇನ್ನೂ ಕೆಲವರು ಯಾರನ್ನೋ ನೆನಪು ಮಾಡುತ್ತಾರೆ. ಅವರೆಲ್ಲರ ಸಾಧನೆಯು ಅಯಥಾರ್ಥವಾಗಿದೆ. ಕಲಿಸುವಂತಹ ಅಂಬಿಗ ಹಾಗೂ ತೋಟದ ಮಾಲಿ ಯಾರೂ ಸಹ ಇಲ್ಲ. ಗುರುಗಳೂ ಸಹ ಯೋಗವನ್ನು ಕಲಿಸುತ್ತಾರೆ. ಈ ರೀತಿ ಮಾಡಿ ಎಂದು ಹೇಳುತ್ತಾರೆ. ನೆನಪಿನಲ್ಲಿರಲು ಬಹಳ ಪ್ರಯತ್ನ ಪಡುತ್ತಾರೆ. ಅದಕ್ಕೆ ಯೋಗದ ಸಾಧನೆ ಎಂದು ಹೇಳಲಾಗುತ್ತದೆ. ಅಲ್ಲಿ ಮನುಷ್ಯರು ಮನುಷ್ಯರಿಗೆ ಯೋಗವನ್ನು ಮಾಡಿಸುತ್ತಾರೆ ಆದರೆ ಇಲ್ಲಿ ಮಾಲಿ ಅಥವಾ ಮಾಲೀಕ ಪರಮಪಿತ ಪರಮಾತ್ಮನಾಗಿದ್ದಾರೆ. ಮುಳ್ಳಿನ ಕಾಡಿನ ಮಾಲೀಕ ರಾವಣನಾಗಿದ್ದಾನೆ. ಮಾಯಾರಾವಣ ಮುಳ್ಳಿನ ಕಾಡನ್ನು ಮಾಡುತ್ತಾನೆ. ಈ ನಿಮ್ಮ ಮಾತುಗಳನ್ನೂ ಸಹ ಕೆಲ-ಕೆಲವರು ತಿಳಿದುಕೊಂಡು ಮರೆತುಬಿಡುತ್ತಾರೆ. ಮಾಯೆಯು ಮರೆಸಿಬಿಡುತ್ತದೆ. ಯೋಗದಲ್ಲಿ ಕುಳಿತುಕೊಳ್ಳಲೂ ಸಹ ಮಾಯೆ ಬಹಳ ವಿಘ್ನವನ್ನು ಹಾಕುತ್ತದೆ. ಯೋಗವನ್ನು ಹೇಗೆ ಮಾಡುವುದೂ ಸಹ ತಂದೆಯು ಕಲಿಸುತ್ತಾರೆ. ನೀವಂತೂ ಕರ್ಮಯೋಗಿಗಳಾಗಿದ್ದೀರಿ. ದಿನದಲ್ಲಂತೂ ಕಾರ್ಯ ಮಾಡುವುದೇ ಆಗಿದೆ ಅದಕ್ಕೆ ಯಾವುದೇ ಬಂಧನವಿಲ್ಲ. ಹಗಲಿನಲ್ಲಿ ಸದಾ ಯೋಗ ಮಾಡಲು ಆಗುವುದಿಲ್ಲ. ಹಗಲಿನಲ್ಲಂತೂ ತಿನ್ನುವುದು, ಕುಡಿಯುವುದು, ಆಟ ಆಡುವುದು, ಕೆಲಸ-ಕಾರ್ಯ ಮಾಡಲಾಗುತ್ತದೆ. ಅದರಲ್ಲಿ ಸ್ವಲ್ಪನಾದರೂ ನೆನಪು ಮಾಡಲು ಸಾಧ್ಯವಿದೆಯಲ್ಲವೆ ಅಂದಾಗ ಹೇಳುವುದಂತೂ ಬಹಳ ಇದೆ ಏನೆಂದರೆ ನಾವು ಇಡೀ ದಿನ ನೆನಪಿನಲ್ಲಿರಲು ಬಹಳ ಕಷ್ಟವಾಗುತ್ತದೆ. ತಂದೆಯು ಅನುಭವವನ್ನು ಹೇಳುತ್ತಾರೆ ಅಮೃತವೇಳೆಯ ಸಮಯ ಸತೋಗುಣಿಯಾಗಿರುತ್ತದೆ, ಆ ಸಮಯದಲ್ಲಿ ನೆನಪು ಮಾಡುವುದು ಸಹಜವಾಗಿದೆ. ಅಮೃತವೇಳೆಯ ಸಮಯ ಎಲ್ಲದಕ್ಕಿಂತ ಚೆನ್ನಾಗಿದೆ. ಹಗಲಿನಲ್ಲಂತೂ ಕೆಲಸ-ಕಾರ್ಯದಲ್ಲಿ ಇರುತ್ತೀರಿ ಮತ್ತು ಕರ್ಮ ಮಾಡುವ ಸಮಯದಲ್ಲಿ ನೆನಪು ಚೆನ್ನಾಗಿ ಸ್ಥಿರವಾಗಲು ಸಾಧ್ಯವಿದೆ ಆದರೆ ತಂದೆಯು (ಬ್ರಹ್ಮಾ) ತಮ್ಮ ಅನುಭವವನ್ನು ಹೇಳುತ್ತಾರೆ - ನಾನು ಪ್ರಯತ್ನ ಪಟ್ಟು ತಂದೆಯ ನೆನಪಿನಲ್ಲಿ ಇದ್ದು ನಿಮ್ಮ ಜೊತೆ ಮಾತನಾಡುತ್ತೇನೆ. ಅಂತರಾಳದಲ್ಲಿ ನಾನು ಸ್ವಯಂ ತಂದೆ (ಪ್ರಜಾಪಿತ ಬ್ರಹ್ಮಾ) ಮಕ್ಕಳ ಜೊತೆ ಮಾತನಾಡುತ್ತಿದ್ದೇನೆ ಎಂದು ನಶೆ ಇರುತ್ತದೆ. ನಾನು ಸ್ವಯಂ ಮನುಷ್ಯಸೃಷ್ಟಿಯ ರಚಯಿತನಾಗಿದ್ದೇನೆ ಎಂದು ತಿಳಿದುಕೊಳ್ಳುವುದರಿಂದ ನಶೆ ಇರುತ್ತದೆ. ಬಾಕಿ ನಾನು ಆತ್ಮನಾಗಿದ್ದೇನೆ, ಪರಮಪಿತಪರಮಾತ್ಮನನ್ನು ನೆನಪು ಮಾಡಿ ಮಾತನಾಡುತ್ತೇನೆ. ಆ ನೆನಪು ಬಹಳ ಶ್ರಮವಾಗುತ್ತದೆ. ತಂದೆಯು ತನ್ನ ಅನುಭವವನ್ನು ತಿಳಿಸುತ್ತಾರಲ್ಲವೆ. ತಂದೆಯು ಕಲಿಸುತ್ತಾರೆ - ನಾನು ತೋಟದ ಮಾಲೀಕನಾಗಿದ್ದೇನೆ ಎಂದು ನಿಮಗೆ ತಿಳಿದಿದೆ. ಮಾಲಿಯಂತೂ ಅವಶ್ಯವಾಗಿ ತೋಟವನ್ನೇ ಮಾಡುತ್ತಾರೆ. ಮುಳ್ಳುಗಳನ್ನು ಮಾಡುವುದಿಲ್ಲ. ಮಾಲಿಯೂ ಮುಳ್ಳುಗಳ ಬೀಜವನ್ನು ಹಾಕುವುದಿಲ್ಲ. ಮಾಲಿಯು ಸದಾ ಕಾಲಕ್ಕೆ ತೋಟಕ್ಕೆ ಮಲೀಕನಾಗಿರುತ್ತಾನೆ. ಹೂವಿನ ಗಿಡವನ್ನೇ ಹಾಕುತ್ತಾನೆ. ತಂದೆಯೂ ಸಹ ಹೂವಿನ ಗಿಡವನ್ನೇ ಹಾಕುತ್ತಾರೆ. ಕಾಡನ್ನಾಗಿ ಮಾಡುವಂತಹವನು ಮಾಯೆಯಾಗಿದೆ. ಅವರ ಮತದಂತೆ ನಡೆಯುವುದರಿಂದ ಮನುಷ್ಯ ಮುಳ್ಳಾಗುತ್ತಾನೆ ಆದರೆ ಈ ಜ್ಞಾನವು ಸಿಕ್ಕಿದೆ ತಂದೆಯು ಮಾಲಿಯಾಗಿದ್ದಾರೆ. ಅಂಬಿಗನಾಗಿದ್ದಾರೆ, ದಯಾಹೃದಯಿ ಆಗಿದ್ದಾರೆ, ಬೀಜರೂಪವಾಗಿದ್ದಾರೆ. ರಾತ್ರಿಯಲ್ಲಿ ಕುಳಿತಿದ್ದಾಗ ಇದು ಎಷ್ಟೊಂದು ದೊಡ್ಡ ತಪ್ಪಾಗಿದೆ! ಎಂದು ಸಂಕಲ್ಪವು ನಡೆಯುತ್ತದೆ. ಮೊದಲು ಎಷ್ಟೊಂದು ಚಿಕ್ಕದಾಗಿತ್ತು ಅಂದಾಗ ಯೋಗದ ಜೊತೆ-ಜೊತೆಗೆ ಜ್ಞಾನವು ಬೇಕು. ಮನುಷ್ಯರ ಬಳಿಯಂತೂ ಜ್ಞಾನವೇನೂ ಇಲ್ಲ. ಅನೇಕ

ಪ್ರಕಾರದ ಯೋಗಗಳನ್ನು ಮಾಡುತ್ತಾರೆ. ಯಾರದಾದರು ನೆನಪಿನಲ್ಲಿ ಕುಳಿತುಕೊಳ್ಳುತ್ತಾರೆ. ಜ್ಞಾನದ ಮಾತೇ ಇರುವುದಿಲ್ಲ. ಕಾಳಿಮಾತೆಯ ನೆನಪಿನಲ್ಲಿ ಕುಳಿತುಕೊಂಡಾಗ ಕಾಳಿಯ ಮುಖವೇ ಎದುರಿಗೆ ಬರುತ್ತದೆ. ಜಗದಾಂಬರವರನ್ನು ನೆನಪು ಮಾಡುತ್ತಾರೆ ಅದು ಭಕ್ತಿಮಾರ್ಗವಾಗಿದೆ. ಅದರಲ್ಲಿ ತಂದೆಯ ನೆನಪು ಇಲ್ಲ, ಆಸ್ತಿಯ ನೆನಪೂ ಇರುವುದಿಲ್ಲ. ಭಕ್ತಿಯನ್ನು ಅನೇಕಪ್ರಕಾರವಾಗಿ ಮಾಡುತ್ತಾರೆ. ಮಾಲೆಯನ್ನು ಜಪಿಸುತ್ತಾರೆ. ಕೆಲವರು ಗುಪ್ತವಾಗಿ ಜಪಿಸುತ್ತಾರೆ. ನಮ್ಮದೂ ಸಹ ಗುಪ್ತ ಮಾಲೆಯಾಗಿದೆ ಅಂದಾಗ ಈ ರೀತಿ ಪದ್ಧತಿಗಳು ಭಕ್ತಿಮಾರ್ಗದಲ್ಲಿ ಎಷ್ಟೊಂದು ನಡೆಯುತ್ತವೆ. ಬ್ರಹ್ಮಾತಂದೆಗೆ ಬಾಲ್ಯತನದ ಅನುಭವವು ಬಹಳಷ್ಟಿದೆ. ಹೇಗೆ ತಂದೆಯು ಜಪಿಸುತ್ತಿದ್ದರು, ನಾವೂ ಸಹ ನೋಡಿ ಒಂದು ಕೊಠಡಿಯಲ್ಲಿ ಕುಳಿತುಕೊಂಡು ಮಾಲೆಯನ್ನು ಜಪಿಸುತ್ತಿದ್ದೆವು, ರಾಮ-ರಾಮ ಎಂದು ಹೇಳುತ್ತಿದ್ದೆವು. ಜ್ಞಾನವಂತೂ ಏನೂ ಇಲ್ಲ. ಈಗಂತೂ ನೀವು ಮಕ್ಕಳಲ್ಲಿ ಜ್ಞಾನವಿದೆ. ಅಮೃತವೇಳೆ ಯೋಗದಲ್ಲಿ ಕುಳಿತುಕೊಳ್ಳುವ ಅಭ್ಯಾಸವನ್ನು ಇಟ್ಟುಕೊಂಡಾಗ ಬಹಳ ಮಜಾ ಬರುತ್ತದೆ. ತಂದೆಯು ತನ್ನ ಅನುಭವವನ್ನು ತಿಳಿಸುತ್ತಾರೆ - ಜ್ಞಾನದ ಸ್ಮರಣೆ ಮಾಡಬೇಕು. ಎಷ್ಟೊಂದು ದೊಡ್ಡ ತೋಟವಾಗಿದೆ. ಮೊದಲು ಚಿಕ್ಕದಾಗಿತ್ತು. ಬೀಜವು ನೆನಪಿಗೆ ಬರುತ್ತದೆ. ತೋಟವು ನೆನಪಿಗೆ ಬರುತ್ತದೆ. ಹೇಗೆ ತೋಟವಾಗುತ್ತದೆ ಎನ್ನುವ ಜ್ಞಾನ ತಂದೆಯಲ್ಲಿ ಇದೆ. ನಮ್ಮಲ್ಲಿಯೂ ಈ ಜ್ಞಾನವಿದೆ. ಇಡೀ ವೃಕ್ಷವು ಬುದ್ಧಿಯಲ್ಲಿ ಬರುತ್ತದೆ. ಅಂತರಾಳದಲ್ಲಿ ನಡೆಯುತ್ತದೆ, ಇದಕ್ಕೆ ಯೋಗವೆಂದು ಹೇಳಲಾಗುತ್ತದೆ. ತಂದೆಯ ಖುಷಿ ಮತ್ತು ಜ್ಞಾನದ ಖುಷಿಯೂ ಇರುತ್ತದೆ. ಎರಡರದ್ದೂ ನೆನಪಿರುತ್ತದೆ. ಆ ತತ್ವ ಜ್ಞಾನಿಗಳು ಈ ರೀತಿ ಯೋಗ ಮಾಡಲು ಕುಳಿತುಕೊಳ್ಳುವುದಿಲ್ಲ. ಅವರಿಗೆ ಅವಶ್ಯವಾಗಿ ತತ್ವವೇ ನೆನಪಿಗೆ ಬರುತ್ತದೆ ಮತ್ತು ತತ್ವದಲ್ಲಿ ಲೀನವಾಗುತ್ತಾರೆ. ರಚಯಿತ ಮತ್ತು ರಚನೆಯ ಬಗ್ಗೆ ಗೊತ್ತೇ ಇರುವುದಿಲ್ಲ ಅಂದಾಗ ಅವರದು ಮತ್ತು ನೀವು ಮಕ್ಕಳದ್ದು ಬೇರೆ ಮತವಾಗಿದೆ.

ತಂದೆಯು ಬೀಜರೂಪವಾಗಿದ್ದಾರೆ. ನಮಗೆ ಈ ಜ್ಞಾನವನ್ನು ಕೊಡುತ್ತಿದ್ದಾರೆ. ರಾತ್ರಿಯಲ್ಲಿ ಕುಳಿತುಕೊಳ್ಳುವುದರಿಂದ ಒಳ್ಳೊಳ್ಳೆಯ ಸಂಕಲ್ಪಗಳು ಬರುತ್ತಿರುತ್ತದೆ. ಭಕ್ತಿಮಾರ್ಗದಲ್ಲಿ ಏನೇನೋ ಮಾಡುತ್ತಿದ್ದೇವೆ ಎಂದು ತಿಳಿದುಕೊಳ್ಳುತ್ತಿದ್ದೇವೆ. ಎಷ್ಟೊಂದು ಹಠಯೋಗ ಮುಂತಾದವುಗಳನ್ನು ತಿಳಿದುಕೊಳ್ಳುತ್ತಾರೆ. ಈಗಂತೂ ತಿಳುವಳಿಕೆ ಸಿಕ್ಕಿದೆ - ತಂದೆಯ ನೆನಪು ಮಾಡುವುದರಿಂದ ಅವರ ಇಡೀ ರಚನೆಯು ನೆನಪಿಗೆ ಬರುತ್ತದೆ. ನಾವು 84 ಜನ್ಮಗಳ ಚಕ್ರವನ್ನು ಸುತ್ತಾಡಿಕೊಂಡು ಬಂದಿದ್ದೇವೆ. ಈಗ ನಾವು ಪುನಃ ಮನೆಗೆ ಹೋಗಬೇಕಾಗಿದೆ. ಈ ನಾಟಕದ ಚಕ್ರವು ತಿರುಗುತ್ತಾ ಬಂದಿದೆ. ಜ್ಞಾನಧನವನ್ನು ಕೊಡುವಂತಹವರ ನೆನಪು ಮಾಡಿ. ಎಷ್ಟು ನೆನಪು ಮಾಡುತ್ತೀರೋ ಅಷ್ಟು ಸ್ಥಿತಿಯು ಪರಿಪಕ್ವವಾಗುತ್ತದೆ. ಯೋಗದಲ್ಲಿ ನಾವು ಹೇಗೆ ಕುಳಿತುಕೊಳ್ಳಬಹುದೆಂದು ನೀವು ಯಾರಿಗಾದರೂ ತಿಳಿಸಿಕೊಡಬಹುದು. ಮನುಷ್ಯರಿಗೆ ಅನೇಕ ಪ್ರಕಾರದ ಮತಗಳು ಸಿಗುತ್ತವೆ. ಇಂತಹವರನ್ನು ನೆನಪು ಮಾಡಿ ಎಂದು ಹೇಳುತ್ತಾರೆ. ಇಲ್ಲಿ ನಾವೆಲ್ಲರೂ ಒಂದೇ ಮತದಂತೆ ಇದ್ದೇವೆ. ಒಬ್ಬರ ನೆನಪಿನಲ್ಲಿಯೇ ಇರುತ್ತೇವೆ. ಚಿಕ್ಕವರು, ದೊಡ್ಡವರು, ಎಲ್ಲರಿಗೂ ಒಂದೇ ಮತ ಸಿಗುತ್ತದೆ. ಯೋಗದಲ್ಲಂತೂ ಕುಳಿತುಕೊಳ್ಳಬೇಕಲ್ಲವೆ. ನಾನು ಆತ್ಮನಿಂದ ಪರಮಾತ್ಮನಾಗಲು ಸಾಧ್ಯವಿಲ್ಲ. ನಾನು 84 ಜನ್ಮಗಳನ್ನು ಪೂರ್ಣ ಮಾಡಿ ಈಗ ಹಿಂತಿರುಗಿ ಹೋಗುತ್ತೇನೆ ಎಂದು ಆತ್ಮವು ಹೇಳುತ್ತದೆ. ಪರಮಾತ್ಮನು ಈ ರೀತಿ ಹೇಳುತ್ತಾರೆಯೇ? ಅವರು ಪುನರ್ಜನ್ಮದಲ್ಲಿ ಬರುವುದಿಲ್ಲ. ನಿಮ್ಮ ಬಳಿ ಯಾರಾದರೂ ಬಂದಾಗ ಅವರನ್ನು ಹಾಲ್ಗೆ ಕರೆದುಕೊಂಡು ಬನ್ನಿ. ಕೆಲವರು ಒಳ್ಳೊಳ್ಳೆಯ ವ್ಯಕ್ತಿಗಳು ಬರುತ್ತಾರೆ. ಅವರಿಗೆ ತಿಳಿದುಕೊಳ್ಳುವ ಇಚ್ಛೆ ಇದ್ದರೆ ಇಲ್ಲಿಗೆ (ಮಧುಬನ) ಕರೆದುಕೊಂಡು ಬನ್ನಿ. ನಾವು ಹೇಗೆ ಯೋಗವನ್ನು ಮಾಡುತ್ತೇವೆ ಎಂದು ಅವರಿಗೆ ತಿಳಿಸಿ. ರಾತ್ರಿಯಲ್ಲಿ ಯೋಗವನ್ನು ಮಾಡುತ್ತಾರೆ, ಹಗಲಿನಲ್ಲಿಯೂ ಮಾಡುತ್ತಾರೆ. ನಾವು ಒಬ್ಬ ತಂದೆಯನ್ನು ನೆನಪು ಮಾಡುತ್ತೇವೆ. ತಂದೆಯ ಆದೇಶವಾಗಿದೆ - ನನ್ನನ್ನು ಮತ್ತು ರಚನೆಯ ಚಕ್ರವನ್ನು ನೆನಪು ಮಾಡಿ. 84 ಜನ್ಮಗಳು ಎಂದು ಗಾಯನ ಮಾಡಲಾಗಿದೆ. ಅವಶ್ಯವಾಗಿ ಮೊಟ್ಟಮೊದಲು ದೇವೀ-ದೇವತೆಗಳು ಇದ್ದರು, ಅವರದೇ 84 ಜನ್ಮಗಳು ಎಂದು ಗಾಯನ ಮಾಡಲಾಯಿತು. ಈ ಚಕ್ರದ ರಹಸ್ಯಗಳನ್ನು ಚೆನ್ನಾಗಿ ತಿಳಿಸಬೇಕು. ನಿಮಗೆ ತಂದೆ ಮತ್ತು ಅವರ ರಚನೆಯ ಈ ಚಕ್ರವನ್ನು ನೆನಪು ಮಾಡಬೇಕು. ತಂದೆಯ ನೆನಪು ಮತ್ತು ರಚನೆಯ ಆದಿ-ಮಧ್ಯ-ಅಂತ್ಯದ ಜ್ಞಾನವು ಬುದ್ಧಿಯಲ್ಲಿ ಇದೆ. ನಿಮ್ಮೆಲ್ಲರದೂ ಒಂದೇ ಮತವಾಗಿದೆ. ನಾವೆಲ್ಲರೂ ಶ್ರೀಮತದಂತೆ ಇದ್ದೇವೆ. ಪತಿತಪಾವನ ತಂದೆಯೇ ಬಂದು ಬೇಹದ್ದಿನ ಸ್ವರ್ಗದ ಆಸ್ತಿಯನ್ನು ಕೊಡುತ್ತಾರೆ. ಅಂದಾಗ ತಂದೆಯನ್ನು ಅವಶ್ಯವಾಗಿ ನೆನಪು ಮಾಡಬೇಕಲ್ಲವೇ. ತಂದೆಯ ಮೂಲಕವೇ ನಾವು ಆಸ್ತಿಯನ್ನು ಪಡೆದುಕೊಳ್ಳುತ್ತೇವೆ ನಂತರ ಕೆಳಗೆ ಇಳಿಯುತ್ತೇವೆ. ಅಂತ್ಯದಲ್ಲಿ ಪತಿತರಾಗುತ್ತೇವೆ. ತಂದೆಯು ರಚಯಿತ ಹಾಗೂ ರಚನೆಯ ಜ್ಞಾನವನ್ನೇ ಕೊಡುತ್ತಾರೆ. ಭಗವಂತ ಒಬ್ಬರೇ ಜ್ಞಾನಸಾಗರ, ಪತಿತಪಾವನ ಆಗಿದ್ದಾರೆ. ಅಂದಾಗ ಅವಶ್ಯವಾಗಿ ಪತಿತಪ್ರಪಂಚದಲ್ಲಿ ಬಂದು ಪಾವನರನ್ನಾಗಿ ಮಾಡುತ್ತಾರಲ್ಲವೇ. ಹಾಗೆಯೇ ನೀವು ಕುಳಿತು ಯಾರಿಗಾದರೂ ತಿಳಿಸಿದಾಗ ಪ್ರಭಾವಿತರಾಗುತ್ತಾರೆ. ಹೇಳಿ- ಕೇವಲ ಒಳ್ಳೆಯದು, ಒಳ್ಳೆಯದು ಎಂದು ಹೇಳಿ ಹೋಗಬೇಡಿ. ಇದನ್ನು ಪ್ರತ್ಯಕ್ಷರೂಪದಲ್ಲಿ ತನ್ನಿ. ಜನ್ಮ-ಜನ್ಮಾಂತರದ ಹೊರೆಯು ಬಹಳಷ್ಟು ಇದೆ. ಇದರಲ್ಲಿ ಸಮಯವು ಹಿಡಿಸುತ್ತದೆ.

ತಂದೆಯು ಬಂದಿದ್ದಾರೆ, ಮೃತ್ಯು ಎದುರಿಗೆ ನಿಂತಿದೆ. ತಪ್ಪು ಮಾಡಿದಾಗ ಆಸ್ತಿಯನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂದು ನೀವು ತಿಳಿಸಬೇಕು. ಶುಭಕಾರ್ಯದಲ್ಲಿ ನಿಧಾನ ಮಾಡಬಾರದಾಗಿದೆ. ಈಗ ಕಲಿತುಕೊಂಡು ಹೋಗಿರಿ. ಈ ಯೋಗದಲ್ಲಿ ಕುಳಿತುಕೊಳ್ಳುವುದರಿಂದ ನಶೆಯು ಚೆನ್ನಾಗಿರುತ್ತದೆ. ಈಗ ತಂದೆಯನ್ನು ನೆನಪು ಮಾಡಿ. ನಿಮ್ಮ ತಂದೆಯಂತೂ ಇದ್ದಾರಲ್ಲವೆ.

ಭಕ್ತಿಮಾರ್ಗದಲ್ಲಿ ಜನ್ಮ-ಜನ್ಮಾಂತರದಿಂದ ನೆನಪು ಮಾಡುತ್ತಾ ಬಂದಿದ್ದೀರಿ. ಲೌಕಿಕ ತಂದೆಯಂತೂ ಪ್ರತಿಯೊಂದು ಜನ್ಮದಲ್ಲಿ ಬದಲಾಗುತ್ತಾರೆ, ಆದರೆ ನೀವು ನಿರಾಕಾರ ತಂದೆಯನ್ನು ಅವಶ್ಯವಾಗಿ ನೆನಪು ಮಾಡಿ ಏಕೆಂದರೆ ಅವರು ಅವಿನಾಶಿ ತಂದೆಯಾಗಿದ್ದಾರೆ. ವಿನಾಶಿ ತಂದೆಯಿಂದ ವಿನಾಶಿ ಆಸ್ತಿ ಸಿಗುತ್ತದೆ. ಅವಿನಾಶಿ ತಂದೆಯಿಂದ ಅವಿನಾಶಿ ಆಸ್ತಿ ಸಿಗುತ್ತದೆ. ಪ್ರತಿಯೊಬ್ಬರು ಶ್ರೀ-ಶ್ರೀರವರ ಮತದಂತೆ ಶ್ರೇಷ್ಠರಾಗುತ್ತಾರೆ. ಆದಿ ಸನಾತನ ದೇವೀದೇವತೆಗಳ ಧರ್ಮವಾಗಿದೆ, ನಂತರ ಅನೇಕ ಧರ್ಮದವರು ಬರುತ್ತಾರೆ. ಸನ್ಯಾಸಿಗಳದ್ದು ರಜೋಪ್ರಧಾನ ಸನ್ಯಾಸವಾಗಿದೆ. ಇದು ಸತೋಪ್ರಧಾನ ಸನ್ಯಾಸವಾಗಿದೆ, ಇದು ರಾಜಯೋಗವಾಗಿದೆ.

ಭಾರತದ ಮುಖ್ಯ ಶಾಸ್ತ್ರ ಗೀತೆ ಯಾಗಿದೆ ಅಂದಾಗ ತಂದೆಯು ನಮಗೆ ಆ ರೀತಿ ರಾಜಯೋಗವನ್ನು ಕಲಿಸುತ್ತಾರೆಂದು ಯೋಗದ ಬಗ್ಗೆ ತಿಳಿಸಬೇಕು. ಭಗವಂತನೆಂದು ಮನುಷ್ಯರಿಗೆ ಹೇಳಲಾಗುವುದಿಲ್ಲ. ಭಗವಂತನು ಎಲ್ಲರಿಗೂ ಒಬ್ಬರೇ ಆಗಿರಬೇಕಲ್ಲವೆ. ಅವರೇ ಪತಿತ-ಪಾವನರಾಗಿದ್ದಾರೆ, ಅವರೇ ಸ್ವರ್ಗದ ರಚಯಿತನಾಗಿದ್ದಾರೆ, ತಂದೆಯಾಗಿದ್ದಾರೆ ಮತ್ತು ಭಾರತದಲ್ಲಿಯೇ ಬರುತ್ತಾರೆ. ಅವರನ್ನು ಭಕ್ತಿಮಾರ್ಗದಲ್ಲಿ ಎಷ್ಟೊಂದು ದೊಡ್ಡ ಮಂದಿರವನ್ನು ಮಾಡುತ್ತಾರೆ. ಆ ಶ್ರೀ-ಶ್ರೀಯವರ ಮತದಂತೆ ನಡೆಯುವುದರಿಂದ ನಾವು ಶ್ರೇಷ್ಠರಾಗುತ್ತೇವೆ. ಈ ಮಾತುಗಳನ್ನು ಕುಳಿತು ತಿಳಿದುಕೊಳ್ಳಿ. ತಂದೆ ಮತ್ತು ರಚನೆಯ ಆದಿ-ಮಧ್ಯ-ಅಂತ್ಯವನ್ನು ತಿಳಿದುಕೊಳ್ಳಿ. ಇದನ್ನು ಬೇರೆ ಯಾರೂ ತಿಳಿಸುವುದಿಲ್ಲ. ಸತ್ಯಯುಗದ ಆಯಸ್ಸು ಇಷ್ಟು ಎಂದು ತಿಳಿಸುತ್ತಾರೆ. ಮೊದಲು ವೃಕ್ಷವು ಹೊಸದಾಗಿತ್ತು ಆದ್ದರಿಂದ ಅದಕ್ಕೆ ಸ್ವರ್ಗವೆಂದು ಹೇಳುತ್ತಾರೆ ನಂತರ ಅದು ಜಡ-ಜಡೀಭೂತವಾಯಿತು. ಈಗ ಇಡೀ ಜಗತ್ತು ನರಕವಾಗಿದೆ. ಮನೆ-ಮನೆಯಲ್ಲೂ ಏನು ಇಡೀ ಪ್ರಪಂಚವೇ ನರಕವಾಗಿದೆ. ಇದು ಮುಳ್ಳಿನ ಕಾಡಾಗಿದೆ. ಒಬ್ಬರಿಗೊಬ್ಬರು ಮುಳ್ಳನ್ನೇ ಚುಚ್ಚುತ್ತಿರುತ್ತಾರೆ. ತಂದೆಯೇ ಬಂದು ಪುನಃ ಹೂವಿನ ತೋಟವನ್ನಾಗಿ ಮಾಡುತ್ತಾರೆ. ತಂದೆಯೇ ಬಂದು ಸ್ವರ್ಗವನ್ನು ಸ್ಥಾಪನೆ ಮಾಡುತ್ತಾರೆ. ಹೂವಿನತೋಟ ಎಂದು ಯಾವುದಕ್ಕೆ ಮತ್ತು ಮುಳ್ಳಿನ ಕಾಡು ಎಂದು ಯಾವುದಕ್ಕೆ ಹೇಳುತ್ತಾರೆ ಎಂದು ನಿಮಗೆ ತಿಳಿದಿದೆ. ನೀವು ದೈವೀ ಹೂಗಳಾಗುತ್ತಿದ್ದೀರಿ ಅಂದಾಗ ಚಿಂತನೆ ನಡೆಯುತ್ತಿರಬೇಕು – ತಂದೆಯಲ್ಲಿಯೇ ಈ ಜ್ಞಾನವಿದೆ, ಮಕ್ಕಳಲ್ಲಿಯೂ ಈ ಜ್ಞಾನವಿದೆ. ಈ ರೀತಿ ಸಂಕಲ್ಪಗಳನ್ನು ಮಾಡುವುದರಿಂದ ಬಹಳಷ್ಟು ಮಜಾ ಬರುತ್ತದೆ. ಈ ರೀತಿ ತಿಳಿಸುತ್ತಿರಬೇಕು. ಅವರು ಏನನ್ನೂ ತಿಳಿದುಕೊಂಡಿಲ್ಲ ಆದ್ದರಿಂದ ತಮಗೆ ದಯೆ ಬರುತ್ತದೆ. ಓ ಗಾಡ್ ಫಾದರ್ ಎಂದು ಹೇಳುತ್ತಾರೆ ಆದರೆ ತಂದೆಯನ್ನು ಮತ್ತು ಅವರ ರಚನೆಯನ್ನು ತಿಳಿದುಕೊಂಡಿಲ್ಲ. ನಾವು ಭಗವಂತನ ಮಕ್ಕಳಾಗಿದ್ದೇವೆ. ತಿಳಿಸಲು ಬಹಳ ನಶೆ ಇರಬೇಕು. ಅವಿನಾಶಿ ಜ್ಞಾನರತ್ನಗಳನ್ನು ನಂತರ ದಾನ ಮಾಡಬೇಕು. ದಾನಿಗಳದ್ದು ಬಹಳ ಬಹಳ ಮಹಿಮೆಯನ್ನು ಮಾಡುತ್ತಾರೆ. ಪತ್ರಿಕೆಯಲ್ಲಿಯೂ ಸಹ ಬರುತ್ತದೆ. ಆಧ್ಯಾತ್ಮಿಕ ಬುದ್ಧಿವುಳ್ಳವರು ದಾನ ಮಾಡುತ್ತಾರೆ. ನೀವಂತೂ ಆಧ್ಯಾತ್ಮಿಕ ಬುದ್ಧಿವುಳ್ಳವರಾಗಿದ್ದೀರಿ. ದಾನವೇ ಮಾಡದಿದ್ದರೆ ಏನು ಸಿಗುತ್ತದೆ? ದಾನವನ್ನು ಅವಶ್ಯವಾಗಿ ಮಾಡಬೇಕು. ಜ್ಞಾನದಾನವನ್ನು ಮಾಡುವುದು ಅತೀ ಸಹಜವಾಗಿದೆ. ತಂದೆಯು ತಿಳಿಸುತ್ತಾರೆ - ನಾವು ಈ ರೀತಿ ಕುಳಿತುಕೊಳ್ಳುವುದು ಪ್ರಪಂಚದ ಚಕ್ರವನ್ನು ಈ ರೀತಿ ತಿರುಗಿಸಬೇಕು. ಮೊದಲು ಒಂದೇ ಧರ್ಮವಿತ್ತು ನಂತರ ಈ ಧರ್ಮವು ಬಂದಿತು. ಇದೆಲ್ಲವೂ ಬಿರುದುಗಳು ಆಗಿವೆ. ಈ ಮಾತುಗಳು ನೀವು ಮಕ್ಕಳ ಬುದ್ಧಿಯಲ್ಲಿ ಕುಳಿತುಕೊಳ್ಳಬೇಕು. ಮನುಷ್ಯರಿಗೆ ಬಹಳಷ್ಟು ಯೋಗದ ಆಸಕ್ತಿ ಇರಬೇಕು. ಹೇಳಿ - ನಮ್ಮ ಯೋಗದಲ್ಲಿ ನಡೆದು ನೋಡಿ. ಆಧ್ಯಾತ್ಮಿಕ ವ್ಯಕ್ತಿಗಳು ಯಾರಾಗಿರುತ್ತಾರೋ ಅವರು ಯೋಗದ ಹಾಲ್ ನೋಡಿ ಖುಷಿ ಪಡುತ್ತಾರೆ. ಆಧ್ಯಾತ್ಮಿಕ ವ್ಯಕ್ತಿಗಳು ಏನೂ ಪಾಪ ಮಾಡುವುದಿಲ್ಲ. ನಿಮ್ಮ ಬಳಿ ತಿಳಿಸಿಕೊಡಲು ವಿಷಯಗಳು ಬಹಳಷ್ಟು ಇದೆ ಆದರೆ ಮಕ್ಕಳು ನಂಬರ್ವಾರಾಗಿದ್ದಾರೆ. ಕೆಲವರಿಗೆ ಬುದ್ಧಿಯ ಬೀಗವನ್ನು ತೆರೆಯಲು ಸಾಧ್ಯವಿಲ್ಲ. ತಂದೆಯನ್ನು ನೆನಪು ಮಾಡದಿದ್ದರೆ ಬೀಗವನ್ನು ತೆರೆಯಲು ಸಾಧ್ಯವಿಲ್ಲ. ಇದು ಬಹಳ ಸಹಜವಾದ ಮಾತಾಗಿದೆ. ನಾವು ಹೇಗೆ ಯೋಗದಲ್ಲಿ ಕುಳಿತುಕೊಳ್ಳುತ್ತೇವೆ ಎಂದು ತಿಳಿಸಬೇಕು. ನಾವು ಯಾರನ್ನು ನೆನಪು ಮಾಡುತ್ತೇವೆ ಎಂದು ಮನುಷ್ಯರಿಗೆ ತಿಳಿದಿಲ್ಲ. ನಮಗೆ ಕಲಿಸುವಂತಹವರು ಸ್ವಯಂ ಪರಮಪಿತ ಪರಮಾತ್ಮನಾಗಿದ್ದಾರೆ. ಅವರೇ ಎಲ್ಲರ ತಂದೆಯಾಗಿದ್ದಾರೆ. ಅವರೇ ಪತಿತಪಾವನ ಭಗವಂತ ನಮಗೆ ರಾಜಯೋಗವನ್ನು ಕಲಿಸುತ್ತಾರೆ. ಈಗ ನೀವು ಕಲಿಯಿರಿ. ನಮ್ಮೆಲ್ಲರದ್ದು ಒಂದೇ ಮತವಾಗಿದೆ. ಶ್ರೀ ಶ್ರೀರವರಿಂದ ಮತವನ್ನು ತೆಗೆದುಕೊಳ್ಳುತ್ತಿದ್ದೇವೆ. ಇದೇ ಗುರಿ-ಉದ್ದೇಶವಾಗಿದೆ. ಹೇಗೆ ತಂದೆಯು ಜ್ಞಾನಸಾಗರನಾಗಿದ್ದಾರೆಯೋ ಹಾಗೆಯೇ ನಾವು ಮಕ್ಕಳಾಗಿದ್ದೇವೆ. ಮನುಷ್ಯರಿಂದ ದೇವತೆಗಳನ್ನಾಗಿ ಒಬ್ಬ ತಂದೆಯೇ ಮಾಡುತ್ತಾರೆ. ಈ ರೀತಿ ವಿಚಾರ ಮಾಡಿದಾಗ ರಾತ್ರಿಯಲ್ಲಿ ಬಹಳ ಮಜ ಬರುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ**:**

1. ಅಮೃತವೇಳೆ ಎದ್ದು ನೆನಪಿನಲ್ಲಿ ಕುಳಿತು ಜ್ಞಾನ ಸ್ಮರಣೆ ಮಾಡಬೇಕಾಗಿದೆ. ಜ್ಞಾನಧನದ ನೆನಪು ಮಾಡಬೇಕಾಗಿದೆ ಅಂದಾಗ ಜ್ಞಾನದ ದಾತನನ್ನೂ ನೆನಪು ಮಾಡಬೇಕಾಗಿದೆ.

2. ಈಶ್ವರೀಯ ನಶೆಯಲ್ಲಿದ್ದು ಸೇವೆಯನ್ನು ಮಾಡಬೇಕು. ಎಲ್ಲರಿಗೂ ಯೋಗವನ್ನು ಮಾಡುವ ಸಹಜವಿಧಿಯನ್ನು ತಿಳಿಸಬೇಕು. ಏಕಮತದವರಾಗಬೇಕು.

ವರದಾನ: ಆತ್ಮೀಯ ಪ್ರಸನ್ನತೆಯ ವೈಭ್ರೇಷನ್ ಮುಖಾಂತರ ಸರ್ವರಿಗೆ ಶಾಂತಿ ಮತ್ತು ಶಕ್ತಿಯ ಅನುಭೂತಿ ಮಾಡಿಸುವಂತಹ ಸರ್ವ ಪ್ರಾಪ್ತಿ ಸ್ವರೂಪ ಭವ.

ಯಾರು ಪರಮಾತ್ಮ ಪ್ರಾಪ್ತಿಗಳಿಂದ ಸಂಪನ್ನ, ಸರ್ವ ಪ್ರಾಪ್ತಿ ಸ್ವರೂಪ ಮಕ್ಕಳಿದ್ದಾರೆ, ಅವರ ಮುಖದ ಮೂಲಕ ಆತ್ಮೀಯ ಪ್ರಸನ್ನತೆಯ ವೈಭ್ರೇಷನ್ ಅನ್ಯ ಆತ್ಮಗಳವರೆಗೆ ತಲುಪುತ್ತಿರುವುದು ಮತ್ತು ಅವರೂ ಸಹ ಶಾಂತಿ ಮತ್ತು ಶಕ್ತಿಯ ಅನುಭೂತಿಯನ್ನು ಮಾಡುವರು. ಯಾವ ರೀತಿ ಫಲ ಕೊಡುವಂತಹ ವೃಕ್ಷ ತನ್ನ ಶೀತಲ ನೆರಳಿನಲ್ಲಿ ಮನುಷ್ಯರಿಗೆ ಶೀತಲತೆಯ ಅನುಭವ ಮಾಡಿಸುತ್ತದೆ ಮತ್ತು ಮನುಷ್ಯ ಪ್ರಸನ್ನವಾಗಿ ಬಿಡುವನು, ಅದೇ ರೀತಿ ನಿಮ್ಮ ಪ್ರಸನ್ನತೆಯ ವೈಭ್ರೇಷನ್ ನಿಮ್ಮ ಪ್ರಾಪ್ತಿಗಳ ನೆರಳಿನ ಮೂಲಕ ತನು-ಮನದ ಶಾಂತಿ ಮತ್ತು ಶಕ್ತಿಯ ಅನುಭೂತಿ ಮಾಡಿಸುವುದು.

ಸ್ಲೋಗನ್: ಯಾರು ಸ್ಮೃತಿ ಸ್ವರೂಪರಾಗಿರುವರು ಅವರಿಗೆ ಯಾವುದೇ ಪರಿಸ್ಥಿತಿ ಆಟದ ಅನುಭವವಾಗುವುದು.